SM – 006

# IV ಸೆಮಿಸ್ಟರ್ ಬಿ.ಎ. ಪರೀಕ್ಷೆ, ಮೇ/ಜೂನ್ 2010
## (ಸೆಮಿಸ್ಟರ್ ಸ್ಕೀಮ್) (Freshers)
## ಕನ್ನಡ ಭಾಷೆ – IV
## ಸಾಹಿತ್ಯ ಸಂವಾದ (ಭಾಗ-೨)

Time : 3 Hours Max. Marks : 90

### ಭಾಗ - 1

I. ಅರ್ಥ ಮತ್ತು ಧ್ವನಿ ಬದಲಾಗದಂತೆ **ಮೂರು** ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. (3×2=6)

1) ಪ್ರತಿ ಬಾರಿಯೂ ಒಲಿಂಪಿಕ್ಸ್‌ನಲ್ಲಿ ಅಚ್ಚರಿಗಳು ಸ್ಫೋಟಗೊಳ್ಳುತ್ತವೆ.
2) ಅಂದು ಸಾಧ್ಯವಾದುದು ಮಾತ್ರ ಇಂದು ಅಸಾಧ್ಯವಾಗಿ ಪರಿಣಮಿಸಿದೆ.
3) ಕ್ರಿಕೆಟ್ ಆಡಲು ತಂತ್ರಬೇಕು, ಕುತಂತ್ರ ಕೂಡ.
4) ಅವನ ಕತೆಗಳು ಮಾತ್ರ ಸುಳ್ಳಾಗಿದ್ದರೂ ಸುಂದರವಾಗಿರುತ್ತಿದ್ದವು.

II. ಅರ್ಥವತ್ತಾದ ಕ್ರಮದಲ್ಲಿ **ಮೂರು** ವಾಕ್ಯಗಳನ್ನು ಪುನಾರಚಿಸಿ. (3×2=6)

1) ಮಾಡಲು ಹಾಗೆ ಸಾಧ್ಯವಿಲ್ಲ ಯಾವತ್ತೂ ಕೂಡ.
2) ಸಂಬಂಧಿಯೊಬ್ಬ ದೂರದ ಅಧ್ಯಕ್ಷನಾಗಿದ್ದ ನನ್ನ.
3) ಪಿತ್ರಾರ್ಜಿತ ಆಸ್ತಿಯಲ್ಲ ಮಾನವನ ಈ ಭೂಮಿ.
4) ಕಾರ್ಯಪ್ರವೃತ್ತರಾಗೋಣ ಈಗಲಾದರೂ ಮಿಂಚಿಲ್ಲ ಕಾಲ.

III. ಉಪಮೆ ರೂಪಕಗಳನ್ನು ಬಳಸಿ **ಮೂರು** ಸ್ವಂತ ವಾಕ್ಯಗಳನ್ನು ರಚಿಸಿ. (3×2=6)

1) ನೀರು ಅಮೃತದಂತೆ
2) ಕೃಷ್ಣನಂತೊಂದು ಮುಗಿಲು
3) ಬೊಗರಿಯಂತೆ

IV. **ಮೂರು** ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. (3×2=6)

1) ತಲೆಬುಡ
2) ಹೃದಯಕ್ಕೆ ನಾಟಿತ್ತು
3) ಹುಟ್ಟಿದ ದಿನ
4) ಕತ್ತೆ ಕಾಲು ಕಟ್ಟು

V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. (2×3=6

1) ಹುಲಿ ಹಳ್ಳಕ್ಕೆ ಬಿದ್ದರೆ ತಲೆಗೊಂದು ಕಲ್ಲು

2) ಅತ್ತ ದರಿ ಇತ್ತ ಪುಲಿ

3) ಅಂಗೈ ಹುಣ್ಣಿಗೆ ಕನ್ನಡಿ ಯಾಕೆ?

4) ಈಸಬೇಕು ಇದ್ದು ಜೈಸಬೇಕು.

## ಭಾಗ - 2

I. ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ. (4×5=20)

1) ಬಡತನ ಕ್ರೀಡಾಯಶಸ್ಸಿಗೆ ಮಾರಕವೇ? ಚರ್ಚಿಸಿ.

2) ಜಾಗತೀಕರಣ ಎಲ್ಲವನ್ನೂ ನುಂಗುತ್ತದೆ ಹೇಗೆ? ವಿವರಿಸಿ.

3) ಜಾತಿ ಪದ್ಧತಿಯಿಂದ ನರಳುತ್ತಿರುವ ಭಾರತೀಯ ಸಮಾಜಕ್ಕೆ ಅಂತರ್‌ಜಾತಿ ವಿವಾಹ ಪರಿಹಾರವೇ? ವಿಶ್ಲೇಷಿಸಿ.

4) 'ಗುಲ್ ಮೊಹರ್' ಕವಿತೆಯಲ್ಲಿ ನಿಸರ್ಗ ಮತ್ತು ಮನುಷ್ಯರ ಸಂಬಂಧ ಗಾಢವಾಗಿ ಸೂಚಿತವಾಗಿದೆಯೇ? ಬರೆಯಿರಿ.

5) ನಾಟಿ ತಳಿಗಳು ಕಣ್ಮರೆಯಾಗಲು ಕಾರಣವಾದ ಸಂಗತಿಗಳೇನು?

## ಭಾಗ - 3

I. **ಎರಡು** ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. (2×10=20)

1) ರಾಮಾಯಣಕ್ಕೆ ಮಕ್ಕಳು ಕೊಡುವ ವಿಭಿನ್ನ ಆಯಾಮಗಳನ್ನು – ಕುವೆಂಪುರವರ ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

2) ಒಲಿಂಪಿಕ್ಸ್ ಪಂದ್ಯಗಳು ಸತತ ರೋಮಾಂಚನವಾಗಿ ಉಳಿಯಲು ಕಾರಣಗಳೇನು?

3) ದೊಂಬರಾಟದ ಮೂಲಕ ತಿಳಿಯುವ ಚೆನ್ನ ಬದುಕಿನ ರಹಸ್ಯವನ್ನು ವಿವರಿಸಿ.

4) ಜಾಗತೀಕರಣವು ವ್ಯಾಪಾರಿ ಸಂಸ್ಕೃತಿಯನ್ನು ಹುಟ್ಟುಹಾಕಲಿದೆಯೇ? ಚರ್ಚಿಸಿ.

## ಭಾಗ - 4

I. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20)

1) ಅಂತರ್ಜಾತೀಯ ವಿವಾಹಿತರನ್ನು ಕುರಿತ ಸಮಾಜದ ಸಾಮಾನ್ಯ ದೃಷ್ಟಿಕೋನಗಳು ಯಾವುವು? ಅದು ಸರಿಯೇ? ವಿವರಿಸಿ.

2) ಹಣ ಪ್ರಧಾನವಾದ ಅರ್ಥವ್ಯವಸ್ಥೆಯು ಭೌತಿಕ ಹಾಗೂ ಸಾಂಸ್ಕೃತಿಕ ದೀವಾಳಿತನಕ್ಕೆ ಮುಳುವಾಯಿತೇ? 'ಗೋಕುಲ ನಿರ್ಗಮನ' ಲೇಖನದ ಹಿನ್ನೆಲೆಯಲ್ಲಿ – ಚರ್ಚಿಸಿ.

3) ಮೂಲಿಕೆ ಬಳ್ಳಿಯ ಪ್ರಭಾವವನ್ನು ಕುರಿತ ಲೇಖಕರ ಭಾವನೆಗಳನ್ನು ತಿಳಿಸಿ.

---

# IV ಸೆಮಿಸ್ಟರ್ ಬಿ.ಎ. ಪರೀಕ್ಷೆ, ಮೇ/ಜೂನ್ 2010
## (ಸೆಮಿಸ್ಟರ್ ಸ್ಕೀಮ್) (Repeaters)
## ಕನ್ನಡ ಭಾಷೆ (ಭಾಷಾ ಪತ್ರಿಕೆ – IV)
## (ವಿದಿಶೆಯ ವಿದೂಷಕ ನಾಟಕ ಮತ್ತು ಉದ್ಭವ ಕಾದಂಬರಿ ಓದಿದ ವಿದ್ಯಾರ್ಥಿಗಳಿಗಾಗಿ)

Time : 3 Hours

Max. Marks : 90

I. ಅ) **ಒಂದರ** ಭಾವವನ್ನು ವಿವರಿಸಿ. **(1×5=5)**

1) ಒಳ್ಳೇ ಸೊಗಸುಗಾರ ಈ ಮಾರಾಜ. ಅಂತಪುರದಾಗಿರೋ ಆ ಕೋತಿ ಹೆಣ್ಣುಗಳನ್ನೇ ನೋಡೋಕಾಗಲ್ಲಪ್ಪ ಎಲ್ಲೆಲ್ಲಿಂದ ಬಂದು ಸೇರಿಕೊಂಡವೋ–ಒಂದಕ್ಕಿಂತ ಒಂದು !.... ರೂಪು ಇರೋ ಹಂಗೇ ಬುದ್ದೀನೋ. ಸದಾ ಕಚಕಚ ಜಗಳಾ ಆಡುತಲೇ ಇರುತಾವಪ್ಪ..... ಇವನ್ನೆಲ್ಲಾ ಗಂಡು ಹಾಕಿಕೊಂಡದ್ದು ಸಾಕು. ಈ ಮಾರಾಜ.

2) ಅಯ್ಯೋ ಅಯ್ಯೋ. ನಿನ್ನ ಈ ಸಜ್ಜನಿಕೆ ನೋಡಿ ಕಣ್ಣಲ್ಲಿ ನೀರು ಬರುತ್ತೇ ಕಣಯ್ಯ. ಆದ್ರೆ ಈ ಇಂಥಾ ನಿನ್ನ ಮೇಲೆ ದ್ವೇಷ ಕಾರುತಾನಲ್ಲಾ ಆ ಎಳೇ ನಿಂಬೆಕಾಯಿ. ಈ ಅರಮನೇಲಿ ನೀನು ಉಂಡದ್ದೆಷ್ಟು, ಅವನು ಉಂಡದ್ದೆಷ್ಟು, ನಿನ್ನ ಕಾಲು ಭಾಗ ಇಲ್ಲ, ನಿನ್ನ ಯೋಗ್ಯತೇಲಿ ನೂರರಲ್ಲಿ ಒಂದು ಪಾಲು ಇಲ್ಲ.... ಹಾಗಿದ್ರೂ ಇವನೂ ... ಸ್ಮರಣೆ ತಕ್ಕೊಂಡ್ರೂ ಬಾಯಿ ದೂರತ್ತೆ ..... ಇವನಿವನಿವನ ..... ಈ ಯ:ಕಶ್ಚಿತ್, ಈ ಕುಲದ ಹೊರಗ ಹುಟ್ಟಿದೋನು ತುಪ್ಪವಿಲ್ಲದೆ ಪಾಯಸ ಕುಡಿಯೋನು – ಅಂಥಿಂಥಾವನಲ್ಲ ಅವನು ಅಲ್ಲದಿದ್ರೆ. ನಿನ್ನೊಂಥೋನ ಮೇಲೆ ಅಂಥಾ ಮಾತಾಡ್ತಿದ್ದನಾ ... ?

ಆ) **ಮೂರಕ್ಕೆ** ಸಂದರ್ಭಸಹಿತ ವಿವರಿಸಿ. **(3×3=9)**

1) ಇದು ಯಾವ್ದೋ ಒಂದು ಹೊಸಾ ಮಿಕ ಇದೆಯಲ್ಲಾ ಚಿತ್ರಾದಾಗೆ....
2) ಇಲ್ನೋಡು, ಸರ್ಪನ ಮುದ್ರೆ ಹೆಂಗಿದೆ ನೋಡು ಹೆಂಗೆ ಪಳಾಪಳಾ ಮಿಂಚ್ತಿದೆ.
3) ಮಿತ್ರಾ ನಿಜವಾಗಿಯೂ ಮನ್ಮಥ ಬಾಣವೇ ಅವಳು.
4) ಅದಕ್ಕೆ ಮತ್ತೆ, ಕುತಂತ್ರಿ ಕೃಷ್ಣಭಟ್ರು ಅಂತ ಅನ್ನೋದು.
5) ಹೆಣ್ಣು ಮಕ್ಕಳನ್ನೆಲ್ಲಾ ಬಿಟ್ಟ ಬಿಡಬೇಕು ಅಂತ ಜ್ಯೋತಿಷಿಗಳು ಹೇಳಿದರಂತೆ.
6) ಮಿಕ ನುಂಗಿದ ಹೆಬ್ಬಾವಿನಂಗೆ ನಿದ್ದೆ ಹೊಡೀತಾ ಬಿದ್ಕೊಂಡಿದೆ.

ಇ) **ಮೂರು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(3×2=6)**

ಕಂಚುಕಿ, ಕೆ.ವಿ. ಸುಬ್ಬಣ್ಣ, ಮಾಧವಿಕೆ, ಕೌಮುದಿಕೆ, ಸಾರಸಕ, ವಾಹತಕ.

II. **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(4×5=20)**

1) ಇಬ್ಬರು ಗುರುಗಳ ಕಲಹಕ್ಕೆ ಕಾರಣವೇನು ? ಪರಿಣಾಮವೇನಾಯಿತು ?
2) ಮಾಲವಿಕೆಯ ಮೇಲೆ ಮಹಾರಾಣಿಯವರು ಬಿಗಿಯಾದ ಕಾವಲು ಹಾಕಲು ಕಾರಣವೇನು ? ವಿವರಿಸಿ.
3) 'ನಾ ನಿನ್ನ ಒದೀತೇನಂತೆ. ಮತ್ತೆ ನಂಗೆ ಒದೆಯೋರು ಯಾರು ?' ಈ ಮಾತಿನ ಹಿನ್ನೆಲೆಯನ್ನು ಚರ್ಚಿಸಿ.
4) ರಾಣಿ ಇರಾವತಿ ಪಾತ್ರವನ್ನು ಕುರಿತು ಬರೆಯಿರಿ.
5) ನೆಲಮಾಳಿಗೆಯಿಂದ ಮಾಲವಿಕೆ ಬಿಡುಗಡೆಯಾದ ಬಗೆ ಹೇಗೆ ?

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ. (2×10=2

1) ನಾಟಕದ ನಾಯಕ ಅಗ್ನಿಮಿತ್ರನ ಗುಣದೋಷಗಳನ್ನು ವಿವರಿಸಿ.

2) ಅಗ್ನಿ ಮಿತ್ರ ಮಾಲವಿಕೆಯನ್ನು ಸೇರುವ ಬಗೆಯನ್ನು ಕುರಿತು ಚರ್ಚಿಸಿ.

3) ಧಾರಿಣಿದೇವಿ, ಪರಿವ್ರಾಜಿಕೆ, ಬಕುಲಾ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿ ಕೊಡಿ.

4) ವಿದಿಶೆಯ ವಿದೂಷಕನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (5×1=

1) 'ಉದ್ಭವ'ದ ಲೇಖಕರು ಯಾರು ?

2) 'ಉದ್ಭವ' ಎಂದರೇನು ?

3) ವಿಘ್ನೇಶ್ವರ ಯುವಕ ಸಂಘದ ಮುಖ್ಯಸ್ಥ ಯಾರು ?

4) 'ಗಣಪತಿ' ಎಲ್ಲಿ ಉದ್ಭವವಾಯಿತು ?

5) ರಾಗಣ್ಣನ ಹೆಂಡತಿಯ ಹೆಸರೇನು ?

6) ರುದ್ರ ನಂಜುಂಡ ಯಾರು ?

7) ಗಣಪತಿ ಶಾಸ್ತ್ರಿಗಳು ಯಾವ ಕೆಲಸದಿಂದ ನಿವೃತ್ತರಾಗಿದ್ದರು ?

V. ಒಂದನ್ನು ಕುರಿತು ವಿವರಣಾತ್ಮಕ ಟಿಪ್ಪಣಿ ಬರೆಯಿರಿ. (1×5=

1) 'ಗಣಪತಿ' ಉದ್ಭವವಾದದ್ದು ಏಕೆ ? ಹೇಗೆ ? ತಿಳಿಸಿ.

2) 'ನಗರದ ಸಂಕೀರ್ಣ ಜೀವನವನ್ನು 'ಉದ್ಭವ' ಕಾದಂಬರಿ ಸಮರ್ಥವಾಗಿ ಚಿತ್ರಿಸಿದೆ' – ಈ ಹೇಳಿಕೆಯನ್ನು ವಿವರಿಸಿರಿ.

VI. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ. (2×10=2

1) ರಾಗಣ್ಣ ಕಿಂಗ್ ಮೇಕರ್ ಆಗಿ ಉಳಿಯಲು ಹೂಡಿದ ಉಪಾಯಗಳಾವುವು ? ವಿವರಿಸಿ.

2) 'ಉದ್ಭವ' ಕಾದಂಬರಿಯ ವಿಶೇಷವೇನು ? ಚರ್ಚಿಸಿ.

3) ಜನರು ರಾಗಣ್ಣನ ವಿರುದ್ಧ ಪ್ರತಿಭಟಿಸದೆ ಏಕೆ ಮೌನವಾಗಿದ್ದರು ? ವಿವರಿಸಿ.

4) ಸುಶೀಲಾ, ಗಣಪತಿ ಶಾಸ್ತ್ರಿ, ಶಂಕರಪ್ಪ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

______________